UN Information Centre
New Delhi

From Wonder, Wisdom
Heartfulness Education Trust

Shri Ram Chandra Mission

# ಸಂಯುಕ್ತ ರಾಷ್ಟ್ರಗಳ ಮಾಹಿತಿ ಕೇಂದ್ರ (ಭಾರತ ಮತ್ತು ಭೂತಾನ್), ಶ್ರೀ ರಾಮಚಂದ್ರ ಮಿಷನ್ ಮತ್ತು ಹಾರ್ಟ್‌ಫುಲ್‌ನೆಸ್ ಶಿಕ್ಷಣ ಟ್ರಸ್ಟ್

## ಅಖಿಲ ಭಾರತ ಪ್ರಬಂಧ ಲೇಖನ ಕಾರ್ಯಕ್ರಮ–2018

ಇದರಲ್ಲಿ ಭಾಗವಹಿಸಲು ತಮ್ಮೆಲ್ಲರನ್ನು ಆಹ್ವಾನಿಸುತ್ತಿವೆ.

## ವಿಷಯಗಳು

ಮೊದಲನೆಯ ವಿಭಾಗ– 9 ರಿಂದ 12ನೇ ತರಗತಿಯವರೆಗೆ (ಪದಮಿತಿ 600)

**ಬೌದ್ಧಿಕ ವಿವೇಕ ಒಂದೆಡೆಯಾದರೆ, ಹೃದಯದ ವಿವೇಕ ಮತ್ತೊಂದೆಡೆ – ಚಾರ್ಲ್ಸ್‌ಡಿಕನ್ಸ್**

**There is a wisdom of the head, and a wisdom of the heart - Charles Dickens**

---

ಎರಡನೆಯ ವಿಭಾಗ– [ಪದವಿ ಮತ್ತು ಸ್ನಾತಕೋತ್ತರ]
ವಯೋಮಿತಿ < 28 ವರ್ಷಗಳು (ನಿರುದ್ಯೋಗಿಗಳಿಗೆ) (ಪದಮಿತಿ 750)

**ತರ್ಕದಿಂದ ತುಂಬಿದ ಮನಸ್ಸು ಎರಡಲಗಿನ ಕತ್ತಿಯಂತೆ. ಬಳಸುವ ಕೈಯನ್ನು ಅದು ಕೊಯ್ಯುತ್ತದೆ. – ರವೀಂದ್ರನಾಥ ಟ್ಯಾಗೋರ್**

**A mind all logic is like a knife all blade. It makes the hand bleed that uses it. - Rabindranath Tagore**

**ಪ್ರಬಂಧಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 12, 2018**

ಹೆಚ್ಚಿನ ಮಾಹಿತಿಗಳು ಹಾಗು ಮೌಲ್ಯಮಾಪನ ನಿಯಮಗಳಿಗಾಗಿ ಸಂಪರ್ಕಿಸಿ
http://www.sahajmarg.org/essay-event
ಅಥವಾ ಈ–ಮೇಲ್ ಕಳುಹಿಸಿ essayevent@srcm.org

### ಸ್ಪರ್ಧಿಗಳಿಗಾಗಿ ನಿಯಮಗಳು ಮತ್ತು ಮಾರ್ಗದರ್ಶಿ ಸೂತ್ರಗಳು

1. ದಯವಿಟ್ಟು ಪ್ರಬಂಧ ಬರೆಯಲು ಇರುವ ಭಾಷೆಗಳ ಆಯ್ಕೆ ಕುರಿತು ಮಾಹಿತಿಯನ್ನು ನಿಮ್ಮ ಶಿಕ್ಷಣಸಂಸ್ಥೆಯ ಪ್ರಬಂಧ ಸ್ಪರ್ಧೆಯ ಸಂಯೋಜಕರಿಂದ ಪಡೆದುಕೊಳ್ಳಿರಿ.
2. ನಿಮ್ಮ ಪ್ರಬಂಧವನ್ನು ಶಿಕ್ಷಣಸಂಸ್ಥೆಯು ನೇಮಿಸಿರುವ ವ್ಯಕ್ತಿಗೆ ಮಾತ್ರವೆ ಹಾಗು ದಿನಾಂಕ **ಆಗಸ್ಟ್ 12, 2018** ರೊಳಗಾಗಿ ಸಲ್ಲಿಸಿರಿ.
3. ಪ್ರಬಂಧಗಳು ನೀಲಿ ಅಥವಾ ಕಪ್ಪುಶಾಯಿಯ ಬರವಣಿಗೆಯಲ್ಲಿರಬೇಕು ಅಥವಾ ಕಂಪ್ಯೂಟರಿನಲ್ಲಿ ಬರಹ/ನುಡಿ ತಂತ್ರಾಂಶದಲ್ಲಿ ಅಕ್ಷರದ ಅಳತೆ 12ಯಲ್ಲಿ ಟೈಪ್ ಮಾಡಿರಬೇಕು. ಕಾಗದದ ಅಳತೆ ಎ4.
4. ನಿರ್ದೇಶಿಸಿರುವಂತೆ ಲೇಖಕರ ಮಾಹಿತಿ ಹಾಳೆಯನ್ನು ನಿಮ್ಮ ಪ್ರಬಂಧದೊಡನೆ ಲಗತ್ತಿಸಿರಿ.
5. ಪ್ರಬಂಧವು ವಿಷಯದ ಬಗೆಗಿನ ನಿಮ್ಮ ವೈಯಕ್ತಿಕ ತಿಳಿವಳಿಕೆಯನ್ನು ಬಿಂಬಿಸಲಿ. ಅಂತರ್ಜಾಲ ಅಥವಾ ಪುಸ್ತಕಗಳಿಂದ ಮಾಡಿದ ಕೃತಿಚೌರ್ಯಕ್ಕೆ ಮಾನ್ಯತೆ ನೀಡಲಾಗುವುದಿಲ್ಲ.
6. ನಿಮಗೆ ಅನ್ವಯವಾಗುವ ವಿಭಾಗದ ವಿಷಯದ ಮೇಲೆ, ಒಂದೇ ಭಾಷೆಯಲ್ಲಿ ಮಾತ್ರ ಪ್ರಬಂಧವನ್ನು ಬರೆಯಿರಿ.
7. ದಯವಿಟ್ಟು ಯಾವುದೇ ರೀತಿಯ ಸಚಿತ್ರ ವಿವರಣೆ ಅಥವಾ ನಕ್ಷೆಗಳನ್ನು ಬರೆಯಬೇಡಿರಿ.

### ವಿಭಾಗೀಯ ಪುರಸ್ಕಾರಗಳು:

1. ರಾಷ್ಟ್ರೀಯ ಮಟ್ಟ: ಆಂಗ್ಲ ಮತ್ತು ಹಿಂದಿ ಭಾಷೆಯ ಮೊದಲ ಹತ್ತು ಅತ್ಯುತ್ತಮ ಪ್ರಬಂಧಗಳು.
2. ರಾಜ್ಯ ಮಟ್ಟ: ಆಂಗ್ಲ ಮತ್ತು ಹಿಂದಿ ಭಾಷೆಯ ಪ್ರಬಂಧಗಳಲ್ಲದೆ, ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಪ್ರಾಂತೀಯ ಭಾಷೆಯ ಮೊದಲ ಹತ್ತು ಅತ್ಯುತ್ತಮ ಪ್ರಬಂಧಗಳು
3. ಸಾಂಸ್ಥಿಕ ಮಟ್ಟ: ಶಿಕ್ಷಣಸಂಸ್ಥೆಯು ಆಯ್ದುಕೊಂಡ ಪ್ರತಿ ಭಾಷೆಯಲ್ಲಿ ಎರಡು ಅತ್ಯುತ್ತಮ ಪ್ರಬಂಧಗಳಿಗೆ ಶ್ರೇಷ್ಠತೆಯ ಪ್ರಮಾಣಪತ್ರ.
4. ಭಾಗವಹಿಸುವಿಕೆಯ ಪ್ರಮಾಣಪತ್ರ: ಭಾಗವಹಿಸಿದವರೆಲ್ಲರಿಗೂ.

ಎಲ್ಲಾ ಪುರಸ್ಕಾರಗಳೂ ಮೌಲ್ಯಮಾಪನಮಂಡಲಿಯ ನಿರ್ಣಯಕ್ಕೆ ಬದ್ಧವಾಗಿರುತ್ತವೆ.
ಆಂಗ್ಲ ಭಾಷೆಯ ಭಿತ್ತಿಪತ್ರದಲ್ಲಿ ಬಿಂಬಿತವಾಗಿರುವ ಮಾಹಿತಿಯ ಉದ್ದೇಶಗಳು ಭಾಷಾಂತರಗೊಂಡ ಮಾಹಿತಿಗಳಿಗಿಂತ ಹೆಚ್ಚು ಮಾನ್ಯತೆ ಪಡೆದಿರುತ್ತವೆ.